ರಾಜ್ಯದಲ್ಲಿ ಖಾಸಗಿ ತಾಂತ್ರಿಕ ಶಾಲೆಗಳಿಗೆ ಅನುದಾನ ನೀಡುವ ಬಗ್ಗೆ

೪೮೮ (೧೬೩೪) ಶ್ರೀ ಎಸ್. ಷಫೀ ಅಹಮದ್ (ತುಮಕೂರು).—ಮಾನ್ಯ ಶಿಕ್ಷಣ, ಯುವಜನ ಸೇವೆ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿನ ಸರ್ಕಾರಿ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಪ್ರವೇಶ ಸಂಖ್ಯೆಗಳೆಷ್ಟು ? (ಈ ಬಗ್ಗೆ ಮಾಹಿತಿ ನೀಡುವುದು)

(ಆ) ಪ್ರತಿವರ್ಷ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು ?

(ಇ) ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಅನುದಾನ ನೀಡದಿರುವುದಕ್ಕೆ ಕಾರಣಗಳೇನು ?

(ಈ) ಅನುದಾನ ಸಂಹಿತೆಯಡಿಯಲ್ಲಿ ಅನುದಾನ ನೀಡುವ ಬಗ್ಗೆ ಸರ್ಕಾರವು ತೆಗೆದು ಕೊಂಡಿರುವ ಕ್ರಮ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

(ಅ) ಸರ್ಕಾರದ್ದು	೩೨
ಖಾಸಗಿ ಅನುದಾನಿತ	೮
ಖಾಸಗಿ ಅನುದಾನರಹಿತ	೧೨೫
ಒಟ್ಟು	೧೬೫

೧೯೯೮–೯೯ನೇ ಸಾಲಿನಲ್ಲಿ ಆವುಗಳಲ್ಲಿಯ ಪ್ರವೇಶ ಸಂಖ್ಯೆಯ ವಿವರಗಳು :

ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ	೫೬೦೫
ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ	೧೫೨೦
ಖಾಸಗಿ ಅನುದಾನ ರಹಿತ ಪಾಲಿಟೆಕ್ನಿಕ್‌ಗಳಲ್ಲಿ	೧೪೬೩೦
ಒಟ್ಟು	೨೧,೭೫೫

(ಆ) ರೂ. ೮,೩೬,೭೬,೦೦೦–೦೦ ಗಳು

(ಇ) ಈಗಿನ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ಅನುದಾನ ಸಂಹಿತೆಯಡಿಯಲ್ಲಿ ತರಲು ಸಾಧ್ಯವಾಗುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

ಶ್ರೀರಂಗಪಟ್ಟಣದಲ್ಲಿನ ಪ್ರಥಮದರ್ಜೆ ಕಾಲೇಜಿನ ಕಟ್ಟಡದ ನಿರ್ಮಾಣದ ಬಗ್ಗೆ

೪೯೨ (೧೬೩೨) ಶ್ರೀಮತಿ ದಮಯಂತಿ ಜೋರಗೌಡ (ಶ್ರೀರಂಗಪಟ್ಟಣ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶ್ರೀರಂಗಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಕಾಲೇಜಿನ ಕಟ್ಟಡವನ್ನು ನಿರ್ಮಿಸಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯು ಪಡೆದ ದಿನಾಂಕ ಯಾವುದು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ ಸಚಿವರು).—

(ಅ) ೧೬೬.

(ಆ) ಮಂಜೂರಾತಿ ನೀಡಿರುವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ. ಹೆಚ್. ಪಾಟೀಲ್.—ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಈ ಸಭೆಯ ಮುಂದಿಡುತ್ತೇನೆ.

Appointment of Teacher in Hassan Constituency

747 (1496) SRI K. H. HANUME GOWDA (Hassan).—Will the Minister for Education, youth services sports, kannada and culture will pleased be state.—

a) In which of the towns of Hassan Constituency there are no teachers in the schools ?

b) when teachers will be appointed in these schools ?

SRI K. H. RANGANATH (Mininister for Education, youth services ports, kannada and culture).—

a) List is enclosed

b) These posts will be filled up shortly.